
# ಭಕ್ತಿಯ ಬಗೆಗಳು



**ಭಕ್ತ :** ಯಾವುದಕ್ಕೆ ತ್ರಿಗುಣಾತೀತ ಭಕ್ತಿ ಅಂತ ಹೇಳುತ್ತಾರೆ?

**ಶ್ರೀರಾಮಕೃಷ್ಣರು:** ಆ ಭಕ್ತಿಯುಂಟಾಯಿತು ಎಂದರೆ, ಎಲ್ಲವೂ ಚಿನ್ಮಯವಾಗಿ ಕಾಣುತ್ತದೆ. ಆತನಿಗೆ 'ಶ್ಯಾಮ ಚಿನ್ಮಯ.' ಆತನ 'ಧಾಮವೂ ಚಿನ್ಮಯ.' ಭಕ್ತನೂ ಚಿನ್ಮಯ. ಎಲ್ಲವೂ ಚಿನ್ಮಯ. ಎಲ್ಲೋ ಕೆಲವರಿಗೆ ಮಾತ್ರ ಆ ವಿಧದ ಭಕ್ತಿಯುಂಟಾಗುತ್ತದೆ.

**ಭಕ್ತ :** ಸಾಧನೆ ಮಾಡಿದರೆ ಜ್ಞಾನ-ಭಕ್ತಿ ಎರಡನ್ನೂ ಗಳಿಸಿಕೊಳ್ಳಲಾಗುವುದಿಲ್ಲವೆ?

**ಶ್ರೀರಾಮಕೃಷ್ಣರು:** ಭಕ್ತಿಮಾರ್ಗವನ್ನು ಅನುಸರಿಸಿದರೆ ಎರಡೂ ದೊರೆಯುತ್ತದೆ. ಆವಶ್ಯಕವೆನಿಸಿದರೆ ಭಗವಂತನೇ ಬ್ರಹ್ಮಜ್ಞಾನವನ್ನು ಕೊಡುತ್ತಾನೆ. ಬಹಳ ಉತ್ತಮ ಸಾಧಕ ಜ್ಞಾನ, ಭಕ್ತಿ ಎರಡನ್ನೂ ಜೊತೆಯಲ್ಲೇ ಬೆಳೆಸಿಕೊಂಡು ಬಿಡುತ್ತಾನೆ.

ಭಗವಂತ ಅವತರಿಸಿ ಭಕ್ತಿಯನ್ನು ಉಪದೇಶ ಮಾಡುತ್ತಾನೆ – ಶರಣಾಗತರಾಗುವಂತೆ ಪ್ರಚೋದಿಸುತ್ತಾನೆ. ಭಕ್ತಿಯಿಂದಲೇ, ಆತನ ಕೃಪೆಯಿಂದ, ಎಲ್ಲವೂ ದೊರೆಯುತ್ತವೆ – ಜ್ಞಾನ, ವಿಜ್ಞಾನ ಎಲ್ಲವೂ ದೊರೆಯುತ್ತವೆ.

ಭಗವಂತ ಈ ಜಗತ್ತಿನಲ್ಲಿ ಲೀಲೆಯನ್ನು ಮಾಡುತ್ತಾನೆ. ಆತ ಭಕ್ತರ ಅಧೀನ. 'ಭಗವತಿ ಶ್ಯಾಮೆ ತನ್ನ ಭಕ್ತರ ಪ್ರೇಮಪಾಶದಿಂದ ತನ್ನನ್ನೇ ತಾನು ಬಂಧಿಸಿಕೊಂಡಿದ್ದಾಳೆ.'

ಕೆಲವರು ಹೇಳುತ್ತಾರೆ, ಯಶೋದಾದಿ ಗೋಪಿಯರು ಹಿಂದಿನ ಜನ್ಮಗಳಲ್ಲಿ ನಿರಾಕಾರವಾದಿಗಳಾಗಿದ್ದರು; ಅದರಿಂದ ಅವರಿಗೆ ತೃಪ್ತಿ ದೊರೆಯಲಿಲ್ಲ ; ಅದಕ್ಕಾಗಿಯೇ ಬೃಂದಾವನ ಲೀಲೆಯಲ್ಲಿ ಶ್ರೀಕೃಷ್ಣನೊಡನೆ ಬಹಳವಾಗಿ ಆನಂದಪಟ್ಟರು ಎಂದು. ಒಂದು ದಿನ ಶ್ರೀಕೃಷ್ಣ ಗೋಪಿಯರಿಗೆ ಹೇಳಿದ: 'ಬನ್ನಿ, ನನ್ನೊಡನೆ ಯಮುನೆಯ ಸ್ನಾನಕ್ಕೆ. ನಿಮಗೆ ನಿತ್ಯಧಾಮದ ದರ್ಶನ ಮಾಡಿಸುತ್ತೇನೆ.' ಅವರು ಯಮುನೆಯಲ್ಲಿ ಮುಳುಗಿ ಏಳುವುದೇ ತಡ, ಗೋಲೋಕದರ್ಶನವಾಯಿತು. ಅನಂತರ ಅವರಿಗೆ, ಅಖಂಡ ಜ್ಯೋತಿಯ ದರ್ಶನ ದೊರೆಯಿತು. ಆಗ ಯಶೋದೆ ಕೂಗಿ ಹೇಳಿದಳು: ''ಓ ಕೃಷ್ಣ, ನಮಗೆ ಇನ್ನು ಇದಾವುದೂ ಬೇಕಾಗಿಲ್ಲ. ಈಗ ನೀನು ನಿನ್ನ ಎಂದಿನ ಮನುಷ್ಯ ರೂಪವನ್ನು ತೋರಿಸು. ನಾನು ನಿನ್ನನ್ನು ಕಂಕುಳಲ್ಲಿ ಎತ್ತಿಕೊಂಡು ನಿನಗೆ ತಿನ್ನಿಸಬೇಕು.''

ಗೋಪಿಯರದು ಪ್ರೇಮಾಭಕ್ತಿ. ಇದರಲ್ಲಿ ಎರಡು ಭಾವಗಳಿವೆ–ಅಹಂಕಾರ, ಮಮಕಾರ. ನಾನು ಕೃಷ್ಣನ ಸೇವೆ ಮಾಡದಿದ್ದರೆ ಆತನಿಗೆ ಅಸೌಖ್ಯವುಂಟಾಗುತ್ತದೆ ಎಂಬ ಭಾವನೆಗೆ ಅಹಂಕಾರ ಎಂದು ಹೆಸರು. ಈ ಭಾವದಲ್ಲಿ ಭಕ್ತ ಭಗವಂತನನ್ನು ಭಗವಂತನೆಂದು ಭಾವಿಸುವುದಿಲ್ಲ. ಎಂದರೆ ಆತನಿಗೆ ಭಗವದ್ಬೋಧೆ ಇರದು.

ಮಮತೆ –'ನನ್ನದು, ನನ್ನದು' ಎನ್ನುವುದು. ಗೋಪಿಯರಿಗೆ ಶ್ರೀಕೃಷ್ಣನಲ್ಲಿ ಅಂಥ ಮಮತೆ, ಆತನ ಪಾದಗಳು ನೋಯಬಹುದೆಂದು ಅವರು ತಮ್ಮ ಸೂಕ್ಷ್ಮ ಶರೀರಗಳನ್ನು ಆತನ ಪಾದದಡಿಯಲ್ಲಿ ಇಡುತ್ತಿದ್ದರು.

ಯಶೋದೆ ಹೇಳಿದಳು: 'ನನಗೆ ನಿಮ್ಮ ಚಿಂತಾಮಣಿ ಕೃಷ್ಣ ಗೊತ್ತಿಲ್ಲ – ಆತ ನನ್ನ ಗೋಪಾಲ.' ಗೋಪಿಯರೂ ಹೇಳಿದರು: 'ನಮ್ಮ ಪ್ರಾಣವಲ್ಲಭನೆಲ್ಲಿ? ಎಲ್ಲಿ ಹೃದಯವಲ್ಲಭ ಕೃಷ್ಣ?' ಅವರಿಗೆ ಭಗವಂತ ಎಂಬ ಬೋಧೆ ಇರಲಿಲ್ಲ.

ಭಗವಂತನ ಕೃಪೆಯೊಂದೊದಗಿತು ಎಂದರೆ ಭಕ್ತ ಎಲ್ಲವನ್ನೂ ಅರಿತುಕೊಳ್ಳಬಲ್ಲ. ಆತನ ಸಾಕ್ಷಾತ್ಕಾರ ಒಮ್ಮೆ ದೊರೆಯಿತು ಎಂದರೆ, ಎಲ್ಲವನ್ನೂ ಅರಿತುಕೊಳ್ಳಲು ಸಾಧ್ಯ. ಒಮ್ಮೆ ಹೇಗಾದರೂ ಮಾಡಿ ಮನೆಯ ಯಜಮಾನನನ್ನು ಸಂಧಿಸಿ ಆತನ ಸ್ನೇಹ ಬೆಳೆಸಿಬಿಟ್ಟದ್ದೇ ಆದರೆ ಆತನೇ ಹೇಳಿಬಿಡುತ್ತಾನೆ ತನಗೆಷ್ಟು ತೋಟತುಡಿಕೆಗಳಿವೆ, ಕೆರೆಕಟ್ಟೆಗಳಿವೆ, ಲೇವಾದೇವಿ ಪತ್ರಗಳಿವೆ ಎಂಬುದನ್ನು.

ಭಗವಂತನ ನಾಮಗುಣಕೀರ್ತನೆಯನ್ನು ಸರ್ವದಾ ಮಾಡುತ್ತಿರಬೇಕು. ವಿಷಯಚಿಂತನೆಯನ್ನು ಸಾಧ್ಯವಾದಷ್ಟು ಮಟ್ಟಿಗೆ ತ್ಯಜಿಸಬೇಕು. ನೀನು ಬೆಳೆ ಬೆಳೆಯಲು ಬಹಳ ಶ್ರಮವಹಿಸಿ ಗದ್ದೆಗೆ ನೀರು ತರಬಹುದು. ಆದರೆ ತೆವರಿಯಲ್ಲಿರುವ ಬಿಲಗಳ ಮೂಲಕ ನೀರೆಲ್ಲಾ ಹೊರಕ್ಕೆ ಹರಿದುಹೋಗಿಬಿಡುತ್ತದೆ ಅಂತ ಇಟ್ಟುಕೋ. ಆಗ ನಾಲೆ ತೋಡಿ ನೀರು ತಂದದ್ದೇ ವೃಥಾ ಪರಿಶ್ರಮ.

ಮನಸ್ಸಿನಲ್ಲಿ ಯಾವ ಕಾಮನೆಯನ್ನೇ ಆಗಲಿ, ವಾಸನೆಯನ್ನೇ ಆಗಲಿ ಇಟ್ಟುಕೊಂಡಿರಬಾರದು. ಕಾಮನೆ, ವಾಸನೆ ಇತ್ತು ಎಂದರೆ, ಅದಕ್ಕೆ ಸಕಾಮ ಭಕ್ತಿ ಅಂತ ಹೆಸರು. ನಿಷ್ಕಾಮ ಭಕ್ತಿಗೆ ಅಹೇತುಕ ಭಕ್ತಿ ಅಂತ ಹೆಸರು. ನೀನು ನನ್ನನ್ನು ಪ್ರೀತಿಸು ಅಥವಾ ಬಿಡು, ನಾನು ಮಾತ್ರ ನಿನ್ನನ್ನು ಪ್ರೀತಿಸುತ್ತೇನೆ. ಇದಕ್ಕೇ ಅಹೇತುಕ ಭಕ್ತಿ ಅಂತ ಹೆಸರು.

ಭಗವಂತನ ಸಾಕ್ಷಾತ್ಕಾರವನ್ನು ಪಡೆದುಕೊಂಡ ನಂತರ ಬರೀ ಪಂಡಿತರು ಕಸಕಡ್ಡಿಯಂತೆ ತೋರಿಬರುತ್ತಾರೆ. ಒಮ್ಮೆ ಪದ್ಮಲೋಚನ ನನಗೆ ಹೇಳಿದ: 'ನಾನು ನಿಮ್ಮೊಡನೆ ಬೆಸ್ತರ ಸಭೆಗೂ ಹೋಗಿಬರಬಲ್ಲೆ. ಅದರಿಂದ ಯಾವ ರಾಜ್ಯ ತಾನೆ ಮುಳುಗಿಹೋಗಿಬಿಟ್ಟೀತು? ನಾನು ನಿಮ್ಮೊಡನೆ ಹರಿಜನರ ಮನೆಗೆ ಹೋಗಿಯೂ ಊಟಮಾಡಿ ಬರಬಲ್ಲೆ.'

**'ಶ್ರೀರಾಮಕೃಷ್ಣ ವಚನವೇದ'**ದಿಂದ